ಅಧ್ಯಕ್ಷರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

15. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ : 05-04-2007 ರಂದು 26 ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಹಾಗೂ ತಡೆಹಿಡಿಯಲಾದ 4 ಪ್ರಶ್ನೆಗಳ ಪೈಕಿ 4 ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 32 ಪ್ರಶ್ನೆಗಳ ಪೈಕಿ 29 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಅನುಬಂಧ - 5)

ಅಧ್ಯಕ್ಷರು :- ಮಂಡಿಸಲಾಯಿತು.

16. ಸಭಾಧ್ಯಕ್ಷರ ತೀರ್ಪು:

ಶ್ರೀ ಕೃಷ್ಣಪ್ಪ:-ಶಿಷ್ಟಾಚಾರ ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕರು ಹಾಗೂ ಸದಸ್ಯರುಗಳು, ಉಭಯ ಮುಖ್ಯಮಂತ್ರಿಗಳು ಹಾಗೂ ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ ಖಾತೆ ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ ಅವರ ವಿರುದ್ಧ ದಿನಾಂಕ 4.4.2007ರಂದು ಹಕ್ಕುಚ್ಯುತಿ ಸೂಚನೆಯನ್ನು ನೀಡಿರುತ್ತಾರೆ.

ಸದರಿ ಸೂಚನೆಯಲ್ಲಿ 2007-08ನೇ ಸಾಲಿನ ಆಗತ್ಯಗಳನ್ನು ವಿಧಾನ ಸಭೆಯಲ್ಲಿ ಚರ್ಚೆಯಾಗಿ, ದಿನಾಂಕ: 30.03.2007 ರಂದು ಮಾನ್ಯ ಮುಖ್ಯಮಂತ್ರಿಗಳು ಸಚಿವರು ಉತ್ತರ ನೀಡಿದ ನಂತರವಾಗಿ, ಹೊಸದಾಗಿ ಪ್ರಸ್ತಾಪಿಸಿದ 20155 ಕೋಟಿಯ 52 ಹೊಸ ಸೇವೆಗಳನ್ನು ಮತ್ತು ವಿಧಾನ ಪರಿಷತ್ತಿನಲ್ಲಿ, ಉತ್ತರಿಸಬೇಕಾಗಿ, ಮಾನ್ಯ ಮಂತ್ರಿಗಳು ನುಡಿದಿದ್ದು, ವಿಧಾನ ಸಭೆಯ ತೀರ್ಮಾನಗಳಿಗೆ ವಿರುದ್ಧವಾಗಿ ಸದರಿ 17 ಕೋಟಿಯ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿ, ಮತ್ತೆ ವಿಧಾನ ಪರಿಷತ್ತಿನಲ್ಲಿ ತಿರಸ್ಕೃತಗೊಂಡ ಉಳಿದ ಆಯವ್ಯಯದ ಮೊತ್ತವನ್ನು ಮರಳಿ ಇವರಿಗೆ ವಿಧಾನ ಸಭೆಯಲ್ಲಿ ಸಾಂವಿಧಾನಿಕವಾಗಿಯೂ ಹಣ, ವಿಧಾನ ಪರಿಷತ್ತಿನಲ್ಲಿ ಹೊಸದಾಗಿ ಪ್ರಾರಂಭಿಸಿದ ಯೋಜನೆಗಳ ಬಗ್ಗೆ ವಿಧಾನ ಸಭೆಯಲ್ಲಿ ಪ್ರಸ್ತಾಪಿಸದೆ, ಒತ್ತಾಯ ವಿಧಾನ ಸಭೆಗೆ ಹಣ ಕಟ್ಟಿಸುವ, ಸಂವಿಧಾನಬದ್ಧವಾದ ಹಣ ಮತ್ತು ವಿಧಾನ ಸಭೆಯ ಅಂತಿಮ ಹಣ ಕುಸಿಯಲೆಯ ವಿಧಾನಮಂಡಲಕ್ಕೆ ಸಂಬಂಧಿಸಿದ ಎರಡೇ ಅಧ್ಯಾಯದ ವಿಧಿಪ್ರಾಣಾಳಿಗಳನ್ನು ಗಾಳಿಗೆ ತುರಿ ಈ ಪ್ರಸ್ತಾಪ ಮತ್ತು ಸದಸ್ಯರ ಹಕ್ಕುಚ್ಯುತಿ ಮಾಡಿ, ವಿಧಾನ ಸಭೆಗೆ ಅವಮಾನ ಮಾಡಿರುವ ಬಗ್ಗೆ ಚರ್ಚಿಸಲು ಹಕ್ಕುಚ್ಯುತಿ ಸಮಿತಿಗೆ ಸೂಚನೆಯನ್ನು ನೀಡುತ್ತಿದ್ದೇವೆಂದು ತಿಳಿಸಿ, ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರಿರುತ್ತಾರೆ.

ದಿನಾಂಕ 11.04.2007 ರಂದು ವಿರೋಧ ಪಕ್ಷದ ಉಪನಾಯಕರು ಶ್ರೀ ಧರಂಸಿಂಗ್, ಶ್ರೀ ಎಸ್.ಬಂಗಾರಪ್ಪ ಎಂ. ಬಿ.ಪಿ ಹಾಗೂ ಶ್ರೀ ಸಿದ್ದರಾಮಯ್ಯನವರು ಹಕ್ಕುಚ್ಯುತಿ ಸೂಚನೆ ಬಗ್ಗೆ ಪ್ರಸ್ತಾಪಿಸುತ್ತ ಕೆಲವರಿಯಲ್ಲಿ 203 ಕೋಟಿ ರೂಪಾಯಿಗಳ 52 ಹೊಸ ಆಯವ್ಯಯಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿ, ಅದರಂತೆ ವಿಧಾನ ಪರಿಷತ್ತಿನಲ್ಲಿ ಮತ್ತೆ 17 ಕೋಟಿ ರೂಪಾಯಿಗಳ ಆಯವ್ಯಯಗಳನ್ನು ಪ್ರಸ್ತಾಪಿಸಿದ್ದರಿಂದ ಹಕ್ಕುಚ್ಯುತಿ ಆಗಿರುವುದೆಂದು ಪ್ರಸ್ತಾಪಿಸಿದ್ದು, ಮುಂದುವರಿದು ಸಂವಿಧಾನದ ಕೆಲವು ಅನುಚ್ಛೇದಗಳನ್ನು ಉಲ್ಲೇಖಿಸಿದ್ದಾ ಆದಾಯವ್ಯಯದಲ್ಲಿ ಪ್ರಸ್ತಾಪಿಸಲಾಗಿರುವ Revenue Receipts, Revenue Expenditure, Revenue Estimates

ನಲ್ಲಿನ ಅಂಕಿ ಅಂಶಗಳಲ್ಲಿ ವ್ಯತ್ಯಾಸವಾಗಿ ಒಟ್ಟಾರೆ ಆಯವ್ಯಯದಲ್ಲಿ ಹೇಳಿದಂತೆ ಉಳಿಕೆ ಬಜೆಟ್ ಆಗಿರುವುದೇ ಕೊರತೆ ಬಜೆಟ್ ಆಗುತ್ತದೆಂದೂ ಪ್ರಸ್ತಾಪಿಸಿರುವುದನ್ನು ಹಾಗೂ ಈ ಹಿಂದೆ ಅಂದಿನ ಕೇಂದ್ರ ಸರ್ಕಾರದ ಹಣಕಾಸು ಸಚಿವರು ಗುಜರಾತಿಗೆ ಸಂಬಂಧಪಟ್ಟ ಆಯವ್ಯಯವನ್ನು ಮೊದಲು ಲೋಕಸಭೆಯಲ್ಲಿ ಮಂಡಿಸದೆ ರಾಜ್ಯ ಸಭೆಯಲ್ಲಿ ಮಂಡಿಸಿದಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದರೆಂದು ಹೇಳಿರುವುದನ್ನು ನಾನು ಗಮನಿಸಿರುತ್ತೇನೆ.

ಸರ್ಕಾರದ ಪರವಾಗಿ ಹಣಕಾಸು ಸಚಿವರು ಆದ ಉಪಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಸದರಿ ಚರ್ಚೆಗೆ ಉತ್ತರಿಸುತ್ತಾ, "ಮುಂಗಡಪತ್ರದ ಮೇಲಿನ ಚರ್ಚೆಯ ನಂತರ ವಿಧಾನ ಸಭೆ ಯಾವ ಮೊತ್ತಕ್ಕೆ ಮತ ಹಾಕಿ ಅನುಮೋದಿಸಿದೆಯೊ ಆ ಮೊತ್ತಕ್ಕೆ ಸೀಮಿತವಾಗಿ ಕರ್ನಾಟಕ ಧನವಿನಿಯೋಗ ಲೇಖಾನುದಾನ ವಿಧೇಯಕ 2007ನ್ನು ಮಂಡಿಸಲಾಗಿದೆ. ಸದರಿ ವಿಧೇಯಕದಲ್ಲಿ ವಿಧಾನ ಸಭೆಯಲ್ಲಿ ಪ್ರಕಟಿಸಿದ ಹೊಸ ಯೋಜನೆಗಳಾಗಲಿ ಅಥವಾ ವಿಧಾನ ಪರಿಷತ್ತಿನಲ್ಲಿ ಪ್ರಕಟಿಸಿದ ಹೊಸ ಯೋಜನೆಗಳಾಗಲಿ ಸೇರಿರುವುದಿಲ್ಲವೆಂದು ಸ್ಪಷ್ಟ ಪಡಿಸಿರುತ್ತಾರೆ. ವಿಧಾನ ಸಭೆಯಲ್ಲಿ ಅಂಗೀಕಾರವಾದ ಸದರಿ ವಿಧೇಯಕ ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ತಿರಸ್ಕಾರವಾಗಿ ಮತ್ತೆ ವಿಧಾನ ಸಭೆಯಲ್ಲಿ ಎರಡನೇ ಬಾರಿಗೆ ಅಂಗೀಕಾರವಾಗಿದೆ. ಮುಂಗಡ ಪತ್ರದ ಮೇಲೆ ನಡೆದ ಈ ಚರ್ಚೆಗೆ ಉತ್ತರಿಸುವ ಕಾಲದಲ್ಲಿ ಗೌರವಾನ್ವಿತ ಕೆಲವು ಸದಸ್ಯರು ಪ್ರಸ್ತಾಪಿಸಿದ ಕೆಲವು ವಿಚಾರಗಳು, ನೀಡಿದ ಕೆಲವು ಸಲಹೆಗಳು, ಬಜೆಟ್ ಮಂಡನೆ ಮಾಡಿದ ಮೇಲೆ ಈ ನಾಡಿನ ಅನೇಕ ಹಿರಿಯರು, ನಾಡಿನ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವ ಜನ ಕೊಟ್ಟಂತಹ ಸಲಹೆ, ಮಂತ್ರಿಮಂಡಲದ ಸದಸ್ಯರು ಕೊಟ್ಟಂತಹ ಸಲಹೆ, ಇವುಗಳ ಆಧಾರದ ಮೇಲೆ ಕೆಲವು ಕಾರ್ಯಕ್ರಮಗಳನ್ನು ಘೋಷಣೆ ಮಾಡಿರುತ್ತಾರೆಂದು, ಈ ಹೊಸ ಯೋಜನೆಗಳು 2007–08ನೇ ಸಾಲಿನ ಕರ್ನಾಟಕ ಧನವಿನಿಯೋಗ 2007ರಲ್ಲಿ ಸೇರಿರುವುದಿಲ್ಲ, ಇದು ಸೇರಿಲ್ಲವೆಂದು ನೂರು ಬಾರಿ ಸ್ಪಷ್ಟ ಮಾಡುತ್ತೇನೆಂದು ತಿಳಿಸಿ, ವಾಡಿಕೆ ಏನೆಂದರೆ, ಹೊಸದಾಗಿ ಪ್ರಕಟಿಸಿರುವ ಯೋಜನೆಗಳನ್ನು ಪೂರಕ ಬಜೆಟ್‌ನಲ್ಲಿ ಮಂಡಿಸುವಾಗ ಹಣಕಾಸಿನ ಅವಕಾಶ ನೋಡಿಕೊಂಡು ಸದನದ ಅನುಮೋದನೆಯನ್ನು ಪಡೆಯುವುದು. ಇದು ಈ ದೇಶದ ಸಂವಿಧಾನದ ಚೌಕಟ್ಟಿನಲ್ಲಿ ವಿಧಾನ ಸಭೆ ಇರಬಹುದು, ಲೋಕಸಭೆ ಇರಬಹುದು ಇದು ನಡೆದುಕೊಂಡು ಬಂದಂತಹ ದಾರಿ. ಈ ರೀತಿಯ ಹೊಸ ಯೋಜನೆಗಳನ್ನು ಪ್ರಕಟಿಸಿರುವುದರಿಂದ ಯಾವುದೇ ಹಕ್ಕುಚ್ಯುತಿಯಾಗಿರುವುದಿಲ್ಲ. ಭಾರತದ ಸಂವಿಧಾನದ 194ರ ಅನುಚ್ಛೇದದ ಅಡಿಯಲ್ಲಿ, ವಿಧಾನ ಮಂಡಲದ ಕೆಲವು

ಹಕ್ಕುಬಾದ್ಯತೆಗಳನ್ನು ನೀಡಲಾಗಿದೆ, ಇವುಗಳ ವ್ಯಾಪ್ತಿಯಲ್ಲಿ ಹಕ್ಕುಚ್ಯುತಿಯನ್ನು ಕಾಂಗ್ರೆಸ್ ಸ್ನೇಹಿತರೇನು ಹೇಳಿದ್ದಾರೆ, ಆ ವಿಷಯ ಈ ಒಂದು ಹಕ್ಕುಚ್ಯುತಿಗೆ ಸೇರುವುದಿಲ್ಲ. ವಿಧಾನ ಪರಿಷತ್ತಿನಲ್ಲಿ ಯಾವುದೇ ಹಣಕಾಸಿನ ವಿಧೇಯಕವನ್ನು ಮೊದಲು ಮಂಡಿಸಲು ಸಂವಿಧಾನದ ಪ್ರಕಾರ ಅವಕಾಶವಿಲ್ಲವೆಂಬುದು ಅವರಿಗೆ ತಿಳಿದಿದ್ದು, ಆದರೆ, ಪ್ರಸ್ತುತ ಸನ್ನಿವೇಶದಲ್ಲಿ, ವಿಧಾನ ಸಭೆಯಲ್ಲಿ ಮಂಡಿಸಿದ ಕರ್ನಾಟಕ ಧನವಿನಿಯೋಗ ವಿಧೇಯಕ 2007, ವಿಧಾನ ಪರಿಷತ್ತಿನಲ್ಲಿ ಯಾವುದೇ ಮಾರ್ಪಾಡಿಲ್ಲದೆ ಹಿಂತಿರುಗಿಸಲ್ಪಟ್ಟಿದ್ದು, ಈಗಾಗಲೇ ಹೇಳಿದಂತೆ 2ನೇ ಬಾರಿಗೆ ವಿಧಾನ ಸಭೆಯಲ್ಲಿ ಅಂಗೀಕಾರವಾಗಿದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ, M.N.Kaul and Shakdarರವರ Practice and Procedure of Parliament ಪುಟ 293 ರಲ್ಲಿ ಈ ಕೆಳಕಂಡಂತೆ ಹೇಳಿದ್ದಾರೆ "If the appropriation accounts are laid on the table of the Legislative Council before they are so laid on the table of the Legislative Assembly, there is no breach of privilege though it would be more appropriate if they were first laid before Assembly which votes or grants, money to the Government. ಅಂದರೆ ವಿಧಾನ ಸಭೆಯಲ್ಲಿ ಮಂಡಿಸುವ ಮುನ್ನವೇ ಹಣಕಾಸಿನ ವಿಧೇಯಕವನ್ನು ಒಂದು ವೇಳೆ ಮಂಡಿಸಿದರೂ ಕೂಡ ಅದು ಅಸಮುಚಿತವಾಗುತ್ತದೆಯೇ ವಿನಃ ಹಕ್ಕುಚ್ಯುತಿಯಾಗಿರುವುದಿಲ್ಲ. ಪ್ರಸ್ತುತ ಎತ್ತಿರುವ ಪ್ರಶ್ನೆ ಈ ಹಿನ್ನೆಲೆಯಲ್ಲಿ ಪರಿಗಣಿಸಿದರೂ ಸಹ ಇದು ಹಕ್ಕುಚ್ಯುತಿ ಉದ್ಭವವಾಗುವುದಿಲ್ಲ. ಆದುದರಿಂದ, ವಿಧಾನ ಸಭೆಯಲ್ಲಾಗಲೀ, ವಿಧಾನ ಪರಿಷತ್ತಿನಲ್ಲಾಗಲೀ ಗೌರವಾನ್ವಿತ ಸದಸ್ಯರಿಗೆ ಅವರು ಯಾವುದೇ ಹಕ್ಕುಚ್ಯುತಿಯನ್ನು _ಮಾಡಿಲ್ಲ. _ಈ ಸದರಿ_ ಪ್ರಕರಣಕ್ಕೆ ಅನ್ವಯಿಸದಿದ್ದರೂ ಸಹ _ಬಜೆಟ್ ಮಂಡಿಸುವ ಸಂದರ್ಭದಲ್ಲಿ announcing increase in levies by the Government on the eve of the budget session has been held not to be a breach of privilege ಎಂದು M.N.Kaul and Shakdar ರವರ Practice and Procedure of Parliament ಪುಟ 294 ರಲ್ಲಿ ಹೇಳಿರುವುದನ್ನು ಸದನದ ಗಮನಕ್ಕೆ ತರುತ್ತೇನೆಂದು ತಿಳಿಸಿರುತ್ತಾರೆ.''

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದ ಅಧ್ಯಾಯ 20ರಲ್ಲಿ ಹಣಕಾಸು ವಿಷಯಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ವಿವರಿಸಲಾಗಿದ್ದು, ಹಣಕಾಸು ಸಚಿವರು ಆಯವ್ಯಯ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡುವಾಗ ಹೊಸ ಯೋಜನೆಗಳನ್ನು ಪ್ರಕಟಿಸಬಾರದೆಂಬ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲ.

ಕೌಲ್ ಅಂಡ್ ಶೇಖ್‌ದಾರ್‌ರವರು ಪ್ರಾಕ್ಟೀಸ್ ಅಂಡ್ ಪ್ರೋಸಿಜರ್ ಆಫ್ ಪಾರ್ಲಿಮೆಂಟ್ ಪುಸ್ತಕದ ಪುಟ ಸಂಖ್ಯೆ 292 ರಲ್ಲಿ "Breaches of rules, conventions and practices are not regarded as breaches of privilege." ಎಂದು ಉಲ್ಲೇಖಿಸಿರುವುದನ್ನು ನಾನು ಗಮನಿಸಿದ್ದೇನೆ.

ಈ ಹಿಂದೆ, ಇದೇ ಸದನದಲ್ಲಿ ಹಿಂದಿನ ಸಭಾಧ್ಯಕ್ಷರುಗಳು, ಲೋಕಸಭೆಯಲ್ಲಿನ ಸಭಾಧ್ಯಕ್ಷರು Alleged incorrect and misleading statements ಎಂಬ ವಿಷಯವು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ತೀರ್ಮಗಳನ್ನು ನೀಡಿರುವುದನ್ನು ಸಹ ನಾನು ಗಮನಿಸಿದ್ದೇನೆ.

ಈ ಸಂದರ್ಭದಲ್ಲಿ ದಿನಾಂಕ 09-06-1980ರಂದು ಶ್ರೀ ಅಟಲ್ ಬಿಹಾರಿ ವಾಜಪೇಯಿರವರು, ದಿನಾಂಕ 16-02-1983 ರಂದು ಪ್ರೊ. ಮಧು ದಂಡವತೆಯವರು, ದಿನಾಂಕ 11-06-1952 ರಂದು ಡಾ: ಪತ್ಯನಾರಾಯಣ ಸಿಪ್ಹರವರು, ದಿನಾಂಕ 02-03-1978 ರಲ್ಲಿ ಶ್ರೀ ಶ್ಯಾಮ್‌ನಂದನ್ ಮಿಶ್ರಾರವರು ಹಾಗೂ ದಿನಾಂಕ 06-03-1989 ರಂದು ಪ್ರೊ. ಮಧು ದಂಡವತೆರವರು ಲೋಕಸಭೆಯಲ್ಲಿ ಪ್ರಸ್ತಾಪಿಸಲಾಗಿರುವ ಹಕ್ಕುಚ್ಯುತಿ ಸೂಚನೆಯ ಬಗ್ಗೆ ಅಲ್ಲಿನ ಸಭಾಧ್ಯಕ್ಷರುಗಳು ನೀಡಿರುವ ತೀರ್ಮಗಳನ್ನೂ ಗಮನಿಸಿದ್ದೇನೆ.

ಭಾರತ ಸಂವಿಧಾನದ ಅನುಚ್ಛೇದ 198ರಲ್ಲಿ ಉಲ್ಲೇಖಿಸಿರುವಂತೆ ಧನ ವಿನಿಯೋಗ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸತಕ್ಕುದಲ್ಲ. ವಿಧಾನ ಸಭೆಯಲ್ಲಿ ಧನವಿಧೇಯಕವನ್ನು ಅಂಗೀಕರಿಸಿದ ತರುವಾಯ ಶಿಫಾರಸ್ಸು ಕೋರಿ ಅದನ್ನು ವಿಧಾನ

ಪರಿಷತ್ತಿಗೆ ಕಳುಹಿಸತಕ್ಕದ್ದು ಮತ್ತು ವಿಧಾನ ಪರಿಷತ್ತು ಆ ವಿಧೇಯಕವನ್ನು ಸ್ವೀಕರಿಸಿದ ದಿನಾಂಕದಿಂದ 14 ದಿನಗಳ ಅವಧಿಯೊಳಗಾಗಿ ತನ್ನ ಶಿಫಾರಸ್ಸುಗಳೊಡನೆ ವಿಧಾನ ಸಭೆಗೆ ಹಿಂದಕ್ಕೆ ಕಳುಹಿಸತಕ್ಕದ್ದು ಮತ್ತು ಆ ನಂತರ ವಿಧಾನ ಸಭೆಯು ವಿಧಾನ ಪರಿಷತ್ತಿನ ಶಿಫಾರಸ್ಸುಗಳನ್ನು ಒಪ್ಪಬಹುದು ಅಥವಾ ತಿರಸ್ಕರಿಸಬಹುದು. ವಿಧಾನ ಪರಿಷತ್ತಿನ ಯಾವ ಶಿಫಾರಸ್ಸುಗಳನ್ನು ವಿಧಾನ ಸಭೆಯು ಒಪ್ಪದಿದ್ದರೆ ಆ ಧನ ವಿಧೇಯಕವು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು. ಪ್ರಸ್ತುತ ಸನ್ನಿವೇಶದಲ್ಲಿ ಯಾವ ಶಿಫಾರಸ್ಸುಗಳಿಲ್ಲದೆ ಹಿಂದಿರುಗಿಸಲ್ಪಟ್ಟ ಸದರಿ ಧನ ವಿಧೇಯಕವನ್ನು ವಿಧಾನ ಸಭೆ ಮೊದಲಿನಂತೆ ಅಂಗೀಕರಿಸಿದ್ದರಿಂದ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳಿಂದ ಅಂಗೀಕೃತವಾಗಿರುವುದಾಗಿ ಭಾವಿಸಲಾಗಿದೆ.

ಮೇಲ್ಗಡೆ ಉಲ್ಲೇಖಿಸಿರುವ ಪ್ರಕರಣಗಳು, ತೀರ್ಪುಗಳು ಹಾಗೂ ಸಂಪ್ರದಾಯಗಳು, ಸೂಚನೆಯ ಬಗ್ಗೆ ನಡೆದ ಚರ್ಚೆ ಹಾಗೂ ಇದಕ್ಕೆ ನೀಡಿರುವ ಉತ್ತರವನ್ನು ನಾನು ಪರಿಶೀಲಿಸಿದ್ದು, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಸದಸ್ಯರುಗಳು ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾದ ಶ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆಯು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ಪರಿಗಣಿಸಿ, ಹಕ್ಕುಚ್ಯುತಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ.